1	2	3	4	5	6	7	8	9	10	11	12	13	14	15
24	353 IPC	4	-	-	4	-	-	-	-	4	-	-	-	-
25	Other IPC	9	-	-	9	-	-	-	-	5	4	-	-	-
	Total	**97**	**-**	**-**	**97**	**-**	**-**	**-**	**-**	**37**	**60**	**-**	**-**	**-**
26	Arms Act	-	-	-	-	-	-	-	-	-	-	-	-	-
27	KP Act	6	-	-	6	-	3	-	-	-	3	-	-	-
28	EC Act	1	-	-	1	-	-	-	-	-	-	1	-	-
29	SC/ST Act	-	-	-	-	-	-	-	-	-	-	-	-	-
30	Explosive Act	-	-	-	-	-	-	-	-	-	-	-	-	-
31	NDPS Act	-	-	-	-	-	-	-	-	-	-	-	-	-
32	PCR Act	-	-	-	-	-	-	-	-	-	-	-	-	-
33	Gambling cases	8	-	-	8	-	3	-	-	5	-	-	-	-
34	Excise Act	12	-	12	-	-	-	-	-	-	-	-	-	-
35	Other S & P Act	-	-	-	-	-	-	-	-	-	-	-	-	-
	Total	**27**	**-**	**12**	**15**	**-**	**6**	**-**	**-**	**8**	**1**	**-**	**-**	**-**
36	107 CRPC	4	-	-	4	-	-	-	-	3	-	-	1	-
37	109 CRPC	8	-	-	8	-	8	-	-	-	-	-	-	-
38	110 CRPC	4	-	-	4	-	4	-	-	-	-	-	-	-
39	145 CRPC	1	-	-	1	-	-	-	-	1	-	-	-	-
40	151 CRPC	-	-	-	-	-	-	-	-	-	-	-	-	-
41	41 CL(D) 102 Crpc	2	-	1	1	-	-	-	-	1	-	-	-	-
	Total	**19**	**-**	**1**	**18**	**-**	**12**	**-**	**-**	**5**	**-**	**-**	**1**	**-**
42.	Man Missing	5	-	-	5	-	-	-	-	-	3	-	2	-
	Grand Total	**118**	**-**	**13**	**135**	**-**	**18**	**-**	**-**	**50**	**64**	**-**	**3**	**-**

ಕಾಗವಾಡ ಚೆಕ್ ಪೋಸ್ಟ್‌ನಲ್ಲಿ ಅವ್ಯವಹಾರ

1556 (882) ಶ್ರೀ ಭರಮಗೌಡ ಅ. ಕಾಗೆ (ಕಾಗವಾಡ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಅಥಣಿ ತಾಲ್ಲೂಕಿನ ಕಾಗವಾಡ ಮತ ಕ್ಷೇತ್ರದ ವ್ಯಾಪ್ತಿಯ ಕಾಗವಾಡದಲ್ಲಿ ಹೊಸದಾಗಿ ಚೆಕ್‌ಪೋಸ್ಟ್ (ಆರ್.ಟಿ.ಓ) ನಿರ್ಮಿಸಲಾಗಿದ್ದು, ಇದರ ಅವಶ್ಯಕತೆ ಇದೆಯೇ?

ಆ) ಈ ಚೆಕ್‌ಪೋಸ್ಟ್‌ನಲ್ಲಿ ಭಾರಿ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದರೆ, ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು) :

ಅ) ಇಲ್ಲಿ ಹೊಸ ಚೆಕ್‌ಪೋಸ್ಟ್ ಅನ್ನು ನಿರ್ಮಿಸಲಾಗಿಲ್ಲ. ಸದರೀ ಕಾಗವಾಡ ಗ್ರಾಮದ ಮುಖಾಂತರ ರಾಜ್ಯ ಹೆದ್ದಾರಿ ಹಾದು ಹೋಗಿ ಮಹಾರಾಷ್ಟ್ರ ರಾಜ್ಯದ ಮೂಲಕ ಉತ್ತರ ಭಾರತದ ರಾಜ್ಯಗಳಿಗೂ ಸಂಪರ್ಕ ಕಲ್ಪಿಸುತ್ತದೆ. ವಾಹನಗಳ ಓಡಾಟ ನಿಯಂತ್ರಣ ಹಾಗೂ

ರಾಜ್ಯದ ರಾಜಸ್ವವನ್ನು ಗಮನದಲ್ಲಿರಿಸಿ ಕೊಂಡು ತಾತ್ಕಾಲಿಕ ಚೆಕ್ ಪಾಯಿಂಟ್‌ನ್ನು ದಿನಾಂಕ 1-1-2002 ರಿಂದ ಪ್ರಾರಂಭಿಸಿದೆ.

ಅ) ಇಲ್ಲ

ಇ) ಉದ್ಭವಿಸುವುದಿಲ್ಲ.

ಸೇಡಂ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ

1557 (2005) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರಕ್ಕೆ ಕಾಗಿನಾ ನದಿಯಿಂದ ಸುಮಾರು 8 ಕಿ.ಮೀ ಅಂತರದಲ್ಲಿ ನೀರು ಸರಬರಾಜು ಮಾಡುವ ಪೈಪುಗಳು ತಾಂತ್ರಿಕವಾಗಿ ಹಾಕದೇ ಇದ್ದುದರಿಂದ ಒಡೆದು ಹೋಗಿ ನೀರು ಸರಬರಾಜು ಸಮರ್ಪಕವಾಗಿ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಈ ಅಸಮರ್ಪಕ ಕಾರ್ಯದಲ್ಲಿ ಸಂಬಂಧ ಪಟ್ಟವರ ಮೇಲೆ ಕೈಗೊಂಡ ಕ್ರಮಗಳೇನು; ಮತ್ತು 2001-02, 2002-03ನೇ ಸಾಲಿನಲ್ಲಿ ಈ ಪೈಪ್‌ಗಳ ದುರಸ್ತಿಗಾಗಿ ಜಿಲ್ಲಾಧಿಕಾರಿಯವರಿಂದ ಮಂಜೂರಾಗಿರುವ ಹಣ ಎಷ್ಟು; ಈ ಹಣ ಕರ್ನಾಟಕ ನಗರ ನೀರು ಸರಬರಾಜು ಮಂಡಲಿ (ಕೆಯುಡಬ್ಲ್ಯೂಎಸ್) ಅವರಿಗೆ, ಪುರಸಭೆಯವರಿಗೆ, ಇನ್ನಿತರರಿಗೆ ಬಿಡುಗಡೆಯಾಗಿರುವುದು ಎಷ್ಟು; (ಇಲಾಖಾವಾರು ಹಾಗೂ ವರ್ಷಾವಾರು ವಿವರ ನೀಡುವುದು)

3) ಅಲ್ಲದೇ ಪುರಸಭೆಯಿಂದ ಇಲ್ಲಿಯವರೆಗೆ ಈ ದುರುಸ್ತಿಗಳಿಗೆ ಖರ್ಚಾಗಿರುವ ಹಣವೆಷ್ಟು;

4) ಇಷ್ಟು ಹಣ ಖರ್ಚಾದರೂ ಸಹ ಸೇಡಂ ನಗರಕ್ಕೆ ಕುಡಿಯುವ ನೀರು ಸಮರ್ಪಕವಾಗಿ ಸರಬರಾಜು ಆಗದಿರಲು ಕಾರಣವೇನು? ಇದಕ್ಕೆ ಜವಾಬ್ದಾರರು ಯಾರು; ಅವರ ಮೇಲೆ ಕೈಗೊಂಡಿರುವ ಕ್ರಮವೇನು?

5) ಸೇಡಂ ನಗರಕ್ಕೆ ಸಮರ್ಪಕವಾಗಿ ನೀರು ಸರಬರಾಜು ಆಗಲು ಸರ್ಕಾರ ಕೈಗೊಂಡಿರುವ ಕ್ರಮವೇನು; ಮತ್ತು ಯಾವಾಗ ನೀರು ಸರಬರಾಜು ಮಾಡಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

1) ಸೇಡಂ ಪಟ್ಟಣದ ನೀರು ಸರಬರಾಜು ಯೋಜನೆಯನ್ನು 1992ರಲ್ಲಿ ಕೈಗೆತ್ತಿಕೊಂಡು 1995ರಲ್ಲಿ ಪೂರ್ಣಗೊಳಿಸಿ ಪುರಸಭೆಯವರಿಗೆ ಹಸ್ತಾಂತರಿಸಲಾಗಿದೆ. ಈ ಯೋಜನೆಯಲ್ಲಿ 300 ಎಂ.ಎಂ. ವ್ಯಾಸದ ಎ.ಸಿ. ಕೊಳವೆಗಳನ್ನು ಅಳವಡಿಸಲಾಗಿದೆ. ಈ ಕೊಳವೆ ಮಾರ್ಗದಲ್ಲಿ ಯಾವುದೇ ತಾಂತ್ರಿಕ ತೊಂದರೆ ಇರುವುದಿಲ್ಲ. ಆದರೆ ಕೆಲವು ಕಡೆ ಏರ್ ವಾಲ್ವ್ ಹಾಗೂ ಕೊಳವೆ ಮಾರ್ಗವನ್ನು ಹಾನಿಗೊಳಿಸಿ ಜನರು ನೀರು ಬಳಸಿಕೊಳ್ಳುತ್ತಿರುವುದು ಕಂಡು ಬಂದಿದೆ.

2) ಈಗಾಗಲೇ ಮಂಡಲಿಯ ಮುಖ್ಯ ಅಭಿಯಂತರರು ಮಾನ್ಯ ಶಾಸಕರು, ಮಾನ್ಯ ಪುರಸಭಾಧ್ಯಕ್ಷರು ಹಾಗೂ ಮಾನ್ಯ ಪುರಸಭಾ ಸದಸ್ಯರು ಹಾಗೂ ಇನ್ನಿತರ ಅಧಿಕಾರಿಗಳೊಂದಿಗೆ ದಿನಾಂಕ 15.1.2002 ರಂದು ಸದರೀ ಕೊಳವೆ ಮಾರ್ಗವನ್ನು ಪರಿವೀಕ್ಷಿಸಿ ವರದಿ ಸಲ್ಲಿಸಿರುತ್ತಾರೆ. ಪರಿವೀಕ್ಷಣೆ ಸಮಯದಲ್ಲಿ ಕೊಳವೆ ಮಾರ್ಗವನ್ನು ತಾಂತ್ರಿಕವಾಗಿ ಹಾಗೂ ಸಮರ್ಪಕವಾಗಿ ಅಳವಡಿಸಿರುವುದಾಗಿ ತಿಳಿದು ಬಂದಿದೆ ಈ ಬಗ್ಗೆ ಸರ್ಕಾರಕ್ಕೆ ಈಗಾಗಲೇ ವರದಿ ಸಲ್ಲಿಸಲಾಗಿದೆ.